ಜಯಶ್ರೀ ಕಾಸರವಳ್ಳಿ

ಕಲೆ: ವೆಂಕಟ್ರಮಣ ಭಟ್

# ಪಾರೂ



ಬಹುಶಃ ಬಾಲ್ಯದಲ್ಲಿ ಸಂಭವಿಸಿದ ಅದೆಷ್ಟೋ ಘಟನೆಗಳಿಗೆಲ್ಲಾ ಮುಂದೊಂದು ದಿನ ಹೀಗೆ ತಕ್ಕಡಿ ಹಿಡಿದು ಏಕಾಏಕಿ ನ್ಯಾಯ ಸಲ್ಲಿಸುತ್ತೇನೆಂದು ಭ್ರಮಿಸುವಂತಹ ಅಪ್ಪಟ ವಿಷಾದದ ಸಂಗತಿ ಬದುಕಿನಲ್ಲಿ ಮತ್ತೊಂದಿರಲಿಕ್ಕಿಲ್ಲವೇನೋ? ಈ ಪಾರು ಬಗ್ಗೆ ಏನು ಹೇಳುವುದೋ ತಿಳಿಯದು. ನನ್ನ ಬಾಲ್ಯವನ್ನು ಕಸಿದವಳೆಂದು ಅನ್ನಬೇಕೇ ಅಥವಾ ಉಳಿಸಿದವಳೆಂದು ಹೇಳಬೇಕೇ ಈಗಲೂ ಗೊಂದಲ. ಆದರೆ ಪಾರು ಎಂದಿಗೂ ನನ್ನ ಅಂತರಂಗದೊಳಗೆ ಇದ್ದವಳೇ. ಒಂದು ರೀತಿಯಲ್ಲಿ ಸಾವಿಲ್ಲದ ದೇವತೆಯಂತೆ ಶಾಶ್ವತವಾಗಿ ಉಳಿದುಹೋದವಳು. ಈಗಲೂ ಪಾರು, ಪಾರ್ವತಿ ಎಂಬ ಹೆಸರು ಎಲ್ಲಿ ಕಿವಿ ಮೇಲೆ ಬಿದ್ದರೂ ಒಂದರೆ ಕ್ಷಣ ನನ್ನ ಎದೆಬಡಿತದ ಲೆಕ್ಕ ತಪ್ಪುತ್ತೆ.